# ಒಂಭತ್ತು ಬಾಗಿಲೊಳು ಒಂದೇ ದೀವಿಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 152.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 326.
3. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 67.
4. **Note:** Lyrics given without highlights are as per Ref. 1. The wordings in Ref. 2 are same as in Ref. 1 except few differences which are given in yellow highligts. The wordings in Ref. 3 are slightly different and hence, they are given separately in green highlights.
5. **Note:** Singer has followed lyrics as in Ref. 1.

ರಾಗ: ಮಾಯಾಮಾಳವ ಗೌಳ                ತಾಳ: ಆದಿ

ಒಂಭತ್ತು ಬಾಗಿಲೊಳು ಒಂದೇ ದೀವಿಗೆ ಹಚ್ಚಿ
ನಂಬಿಕಿಲ್ಲದ ಸಂಸಾರ ಮಾಡಿದೆನೆ ಸೂವಿಯಾ ಬೀಬಿ ॥ ಪ ॥

ತನುವೆಂಬ ಕಲ್ಲಿನೊಳು ಮನವೆಂಬ ಧಾನ್ಯವ ತುಂಬಿ
ವನವನದು ನವಬೇಳೆ ಬೀಸಿದೆನೆ ॥ ೧ ॥

ಅಷ್ಟ ಕರ್ತೃಗಳೆಂಬೊ ಅಷ್ಟ ನವಧಾನ್ಯವ ತಂದು
ಕುಟ್ಟಿ ಕಟ್ಟಿ ಕಜ್ಜಾಯ ಕರಿದೆನೆ ॥ ೨ ॥

ಅಷ್ಟ ಕರ್ತೃಗಳೆಂಬೊ ಕಾಲವನ್ನುಳುಹಿ ನಾನು (ಅಷ್ಟ ಕರ್ಮಗಳೆಂಬೋ ಕಾಷ್ಠವನ್ನುರುಹಿ ನಾನು)
ನಿಷ್ಠೆಯಿಂದಲಿ ಅನ್ನವ ಬಾಗಿದೆನೆ ॥ ೩ ॥

ಅಷ್ಟರೊಳಗೆನ್ನ ಗಂಡ ಬಂದು ಅಡುವ ಮಡಿಕೆಯ ಒಡೆದು
ಮುಟ್ಟಿ ಮುರಿದು ಮೂಲೆಗೆ ಹಾಕಿದನೆ ॥ ೪ ॥

ಉಡುವ ಸೀರೆಯ ಸೆಳೆದು ಗಿಡದ ತೊಪ್ಪಲ ಸುತ್ತಿ
ತಿರುಗಿ ಬಾರದ್ಹಾಂಗೆ ಮಾಡಿದನೆ ॥ ೫ ॥

ಮಾಡಿದೆ ಒಗೆತನವ ನಂಬಿಕಿಲ್ಲದ ಸಂಸಾರವ ನೆಚ್ಚಿ
ಕೂಡಿದೆ ಪುರಂದರ ವಿಠಲನ್ನ ದಾಸರ ॥ ೬॥

**Note:** Below given lyrics in green highlights are as per Ref. 3 above.

ರಾಗ: ಸೌರಾಷ್ಟ್ರ ತಾಳ: ಆದಿ

ಒಂಭತ್ತು ಬಾಗಿಲೊಳು ಒಂದು ದೀಪವ ಹಚ್ಚಿ
ನಂಬಿಗಿಲ್ಲದೆ ಒಗೆತನ ಮಾಡಿದೆನೆ ಸುವಕ್ಕ ಸುವ್ವಿ ॥ ಪ ॥

ತನುವೆಂಬ ಕಲ್ಲಿಗೆ ಮನ ಧಾನ್ಯವನು ತುಂಬಿ
ಒನೆದೊನೆದು ಒಬ್ಬಳೆ ಬಿಸಿದೆನೆ ॥ ೧ ॥

ಅಷ್ಟ ಮದಗಳೆಂಬ ಅಷ್ಟ ಧಾನ್ಯವ ತೆಗೆದು
ಕುಟ್ಟಿ ಕುಟ್ಟಿ ಕಾಳು ಮಾಡಿದೆನೆ ॥ ೨ ॥

ನಷ್ಟ ತರ್ಕವೆಂಬ ಕಟ್ಟಿಗೆ ಉರಿದು ನಾ
ನಿಷ್ಠೆಯಿಂದನ್ನವ ಮಾಡಿದೆನೆ ॥ ૩ ॥

ಅಷ್ಟರೊಳು ಗಂಡ ಬಂದ ಅಡುವ ಗಡಿಗೆಯ ಒಡೆದು
ಹುಟ್ಟು ಮುರಿದು ಮೂಲೆಗೆ ಹಾಕಿದನೆ ॥ ೪ ॥

ಹುಟ್ಟಿನಲಿರುತಿಹ ಒಟ್ಟಿನಲಿ ಕುದಿಸುವ
ಕಟ್ಟಂಬಲಿಯನೆತ್ತಿ ಕುಡಿಸಿದನೆ ॥ ೫ ॥

ಉಡುವ ಸೀರೆಯ ಸೆಳೆದು ಗಿಡದ ತೊಪ್ಪಲ ಸುತ್ತಿ
ಕಡೆಗೆ ಬಾರದ ಹಾಗೆ ಮಾಡಿದನೆ ॥ ೬ ॥

ಮಾಡಿದೆನೆ ಒಗೆತನ ನಂಬಿಗಿಲ್ಲದ ಮನೆಯೊಳು
ಕೂಡಿದೆನೆ ಪುರಂದರ ವಿಠಲನ ॥ ೭ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಒಂಬತ್ತು ಬಾಗಿಲೊಳು** – 'ನವದ್ವಾರೇ ಪುರೇ' ಎಂಬ ಕಲ್ಪನೆ; ದೇಹಕ್ಕೆ ಒಂಬತ್ತು ಬಾಗಿಲುಗಳು; ಕಣ್ಣುಗಳೆರಡು, ಕಿವಿಗಳೆರಡು, ಬಾಯಿ ಒಂದು, ಮೂಗಿನ ಹೊಳ್ಳೆಗಳೆರಡು, ಮೂತ್ರದ್ವಾರ, ಮಲದ್ವಾರ.

**ಒಂದೇ ದೀವಿಗೆ** – ವ್ಯವಹಾರಕ್ಕೆ ಬೆಳಕನ್ನು ಕೊಡುವ ಬುದ್ಧಿ.

**ನಂಬಿಕಿಲ್ಲದ ಸಂಸಾರ** – ವಿರಕ್ತಿ.

**ಸೂವಿಯಾ ಬೀಬಿ** – ಸೌವಿದ; ಹೆಂಗಳೆಯರ ಒಳಕೋಣೆಯಲ್ಲಿ ಊಳಿಗ ಮಾಡುವ ಹೆಣ್ಣು; ಇಲ್ಲಿ ಮನಸ್ಸು.

**ತನುವೆಂಬ ಕಲ್ಲಿನೊಳು** – ಶರೀರವೆಂಬ ಚೀಲದಲ್ಲಿ.

**ವನವನದು** – ಒಂದರಿಯಾಡಿ, ಜಲ್ಲಡಿಯಾಡಿ.

**ನವಬೇಳೆ ಬೀಸಿದೆ** – ಒಂಬತ್ತು ಬಗೆಯ ಬೇಳೆಗಳು; ಇಲ್ಲಿ ನವವಿಧ ಭಕ್ತಿ.

**ಅಷ್ಟ ಕರ್ತೃಗಳೆಂಬೊ** – ಭೂತ, ತನ್ಮಾತ್ರ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣ, ಗುಣ, ಪ್ರವೃತ್ತಿ, ಕಾಲ ಇವು ಎಂಟು ಎಲ್ಲ ಕೆಲಸಗಳನ್ನೂ ಮಾಡಿಸುವುವು.

**ಅಷ್ಟ ನವಧಾನ್ಯವ** – ಎಂಟು ಭಾವಗಳು ಹೊಸದಾಗಿ ಮೂಡಿಕೊಂಡವು; ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ.

**ಅಷ್ಟ ಕರ್ಮಗಳೆಂಬೊ** – ಶಮ, ದಮ, ತಪಸ್ಸು, ಶೌಚ, ಕ್ಷಾಂತಿ, ಜ್ಞಾನ, ವಿಜ್ಞಾನ, ಆರ್ಜವ.

**ಶಮ** = ಮನೋ ನಿಗ್ರಹ

**ದಮ** = ಇಂದ್ರಿಯ ನಿಗ್ರಹ

**ಶೌಚ** = ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ

**ಕ್ಷಾಂತಿ** = ಸಹನೆ

**ಆರ್ಜವ = *ಪ್ರಾಮಾಣಿಕತೆಯ ಸ್ಥಿತಿ ಅಥವಾ ಗುಣಮಟ್ಟ*;** ಪ್ರಾಮಾಣಿಕತೆ a) ಸುಳ್ಳು, ಮೋಸ ಅಥವಾ ಕಳ್ಳತನದಿಂದ ದೂರವಿರುವುದು; ಸತ್ಯವಂತ, ನಂಬಲರ್ಹ

**ಕಾಷ್ಠವನ್ನುರುಹಿ –** ಕಟ್ಟಿಗೆಯನ್ನು ಉರಿಸಿ.

**ಉಳುಹು** = ಕಾಪಾಡು, ಉಳಿಸು

**ಅರುಹು** = ತಿಳಿಸು, ಜ್ಞಾನ

**ಎನ್ನ ಗಂಡ –** ಬಿಂಬರೂಪಿಯಾದ ಪರಮಾತ್ಮ.

**ಅಡುವ ಮಡಕೆ –** ಅಡುಗೆಮಾಡುವ ಮಡಕೆ; ಕರ್ಮ.

**ಉಡುವ ಸೀರೆ –** ಭ್ರಮೆಯೆಂಬ ಬಂಧನ (ಸ್ವಾತಂತ್ರ್ಯ ಭ್ರಮ, ಕರ್ತೃತ್ವ ಭ್ರಮ, ಈಶಿತ್ವ ಭ್ರಮ).

**ಗಿಡದ ತೊಪ್ಪಲ –** ಭಕ್ತಿ.

**ತಿರುಗಿ ಬಾರದ್ಹಾಂಗೆ –** ಮತ್ತೆ ಸಂಸಾರಕ್ಕೆ ಬರದಂತೆ; ಎಂದರೆ ಮುಕ್ತಿಯನ್ನು ಕೊಟ್ಟು.

**Classification:** Mundige
**Ankita:** purandara vittala
**Location:** NA
**Category:** Bimba Roopa
**Sub-Category:** bagilu, deepa, kallu, mana, dhyana, dhanya, karma, anna, pati, patni, samsara, hengasu, deha, bimaba, bimba roopa, mukti,
**Pravachana:** NA
**Explanation:** NA